<table>
<tr><td colspan="4">ಕರ್ನಾಟಕ ಸರ್ಕಾರ (ಸಿ.ಆರ್.ಪಿ-67)</td></tr>
<tr><td rowspan="4">ಹೇಳಿಕೆ ಹಾಳೆ (ಆರ್.ಸಿ. ಸಂಖ್ಯೆ 57) ನಮೂನೆ ಸಂಖ್ಯೆ 4</td><td colspan="3">ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಚನ್ನಪಟ್ಟಣ</td></tr>
<tr><td colspan="3">ಸಿ.ಸಿ ನಂ. 4609/2022</td></tr>
<tr><td></td><td>ಸಿ.ಡಬ್ಲ್ಯೂ</td><td>11</td></tr>
<tr><td></td><td>ಪಿ.ಡಬ್ಲ್ಯೂ</td><td>8</td></tr>
<tr><td>ಸಾಕ್ಷಿದಾರರ ಹೆಸರು</td><td colspan="3">ಎ.ಆರ್. ಮೋಹನ್ ಬಿನ್ ರಾಜಶೇಖರ್ ಎ.ಎಸ್.</td></tr>
<tr><td>ವಯಸ್ಸು</td><td colspan="3">51 ವರ್ಷ</td></tr>
<tr><td>ಉದ್ಯೋಗ</td><td colspan="3">ಎ.ಎಸ್.ಐ. , ಚನ್ನಪಟ್ಟಣ ಗ್ರಾಮಾಂತರ ಠಾಣೆ</td></tr>
<tr><td>ವಾಸಸ್ಥಳ</td><td colspan="3">ಚನ್ನಪಟ್ಟಣ</td></tr>
</table>

ದಿನಾಂಕಃ **23.09.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

**1)** ನಾನು ಆಗಸ್ಟ್ **2020** ರಿಂದ ಈಗಲೂ ಸಹ ಚನ್ನಪಟ್ಟಣ ಗ್ರಾಮಾಂತರ ಪೋಲಿಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ಮಾಡುತ್ತಿದ್ದೇನೆ.

**2)** ದಿ. **06.03.2022** ರಂದು ಬೆಳಿಗ್ಗೆ **8.00** ಗಂಟೆಗೆ ನಾನು ಠಾಣೆಯಲ್ಲಿದ್ದಾಗ ಚಾಸಾಃ **1** ರವರು ಠಾಣೆಗೆ ಹಾಜರಾಗಿ ನೀಡಿದ ಒಂದು ದೂರನ್ನು ಸ್ವೀಕರಿಸಿ ಠಾಣಾ ಗುನ್ನಾ ನಂ. **66/2022** ರಂತೆ ಪ್ರಕರಣ ದಾಖಲಿಸಿಕೊಂಡು ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**3)** ದಿ. **06.03.2022** ರಂದು ಚಾಸಾ **1** ರವರು ಜಪ್ತುಪಡಿಸಿಕೊಂಡಿದ್ದ **57** ಪ್ಲಾಸ್ಟಿಕ್ ಚೀಲದ ಅಕ್ಕಿ ಮೂಟೆಗಳನ್ನು ಮತ್ತು ಕೆ ಎ **42** ಎ **5236** ನೇದ್ದರ ಟಾಟಾ ಗೂಡ್ಸ್ ವಾಹನವನ್ನು ನನ್ನ ಮುಂದೆ ಹಾಜರುಪಡಿಸಿದ್ದರು. ಸದರಿ ವಸ್ತುಗಳ ಭಾವಚಿತ್ರಗಳನ್ನು ತೆಗೆದಿರುತ್ತೇನೆ. ಸದರಿ ವಾಹನದ ಭಾವಚಿತ್ರವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿ ಪಿ **4** ಮತ್ತು **5** ರ ಭಾವಚಿತ್ರಗಳಲ್ಲಿ ಕಾಣುವ ವಾಹನವನ್ನು ನೋಡಿ ಗುರುತಿಸುತ್ತಾರೆ. **4** ನೇ ಆರೋಪಿತನನ್ನು ವಿಚಾರಣೆ ಮಾಡಿ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಆತ ಗೋಣಿ ಚೀಲದಲ್ಲಿ ಇದ್ದ ಅಕ್ಕಿಯನ್ನು ಪ್ಲಾಸ್ಟಿಕ್ ಚೀಲಕ್ಕೆ ಹಾಕಿ ಗೋಣಿ ಚೀಲವನ್ನು ಸುಟ್ಟು ಹಾಕಿದ್ದ ಜಾಗವನ್ನು ತೋರಿಸುವುದಾಗಿ ಹೇಳಿದ್ದು, ಆತ ಬೆಳಿಗ್ಗೆ **11.00** ಗಂಟೆಗೆ ಸದರಿ ಸ್ಥಳಕ್ಕೆ ಕರೆದುಕೊಂಡು ಹೋಗಿ ಸ್ಥಳಕ್ಕೆ ಪಂಚರಾದ ಚಾಸಾ **5** ಮತ್ತು **6** ರವರ ಸಮಕ್ಷಮ ಪಂಚನಾಮೆಯನ್ನು ಮಾಡಿರುತ್ತೇನೆ. ಅದೇ ದಿನ **4** ನೇ ಆರೋಪಿತನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಸದರಿ ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ **4** ನೇ

ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ. ಅಮಾನತ್ತು ಪಡಿಸಿದ ಅಕ್ಕಿ ಮೂಟೆಗಳನ್ನು ಚಾಸಾ **7** ರವರಿಗೆ ವಹಿಸಿರುತ್ತೇನೆ. ಆ ಬಗ್ಗೆ ಸದರಿಯವರು ಸ್ವೀಕೃತಿಯನ್ನು ನೀಡಿರುತ್ತಾರೆ. ಉಳಿದ ಆರೋಪಿತರು ನ್ಯಾಯಾಲಯದಿಂದ ಜಾಮೀನು ಪಡೆದು ಠಾಣೆಗೆ ಹಾಜರಾಗಿದ್ದು ಸದರಿಯವರನ್ನು ಮುಚ್ಚಳಿಕೆ ಪಡೆದು ಬಿಡುಗಡೆ ಮಾಡಿರುತ್ತೇನೆ. ಸದರಿ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿದ್ದು, ಆ ಪೈಕಿ **1** ನೇ ಆರೋಪಿತ ಗೈರು ಹಾಜರಿರುವುದಾಗಿ ನುಡಿಯುತ್ತಾರೆ. ಸದರಿ ಆರೋಪಿತನ ಗುರುತಿಸುವಿಕೆ ಬಗ್ಗೆ ತಕರಾರು ಇಲ್ಲ ಎಂದು ಆತನ ಪರ ಮಾನ್ಯ ವಕೀಲರು ತಿಳಿಸಿರುತ್ತಾರೆ.

**4)** ಚಾಸಾಃ **2** ರಿಂದ **4 , 8** ರಿಂದ **10** ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಜಪ್ತುಪಡಿಸಿದ್ದ ವಾಹನದ ದಾಖಲೆಗಳನ್ನು ಆನ್ ಲೈನ್ ಮುಖಾಂತರ ಪಡೆದುಕೊಂಡಿರುತ್ತೇನೆ. ಚಾಸಾ **7** ರವರಿಂದ ವರದಿ ಪಡೆದ ನಂತರ ಪ್ರಕರಣದ ತನಿಖೆ ಮುಗಿದಿದ್ದು ಆರೋಪಿತರ ಮೇಲೆ ದೋಷಾರೋಪಣೆ ಪತ್ರ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**5)** ದೂರನ್ನು ಸ್ವೀಕರಿಸಿದ ಬಗ್ಗೆ ಇರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ದೂರನ್ನು ನಿಪಿಃ **2** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ **2**(ಬಿ) ಎಂದು ಗುರ್ತಿಸಲಾಯಿತು.

**6)** ಪ್ರ.ವ.ವಯನ್ನು ನಿಪಿಃ **6** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **6**(ಎ) ಎಂದು ಗುರ್ತಿಸಲಾಯಿತು.

**7)** ನಿಪಿ **3** ಪಂಚನಾಮೆ ಮೇಲೆ ಇರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿ ಪಿ **3** (ಸಿ) ಎಂದು ಗುರುತಿಸಲಾಯಿತು.

**8)** ದಿಃ **26.03.2022** ರಂದು ಆಹಾರ ನಿರೀಕ್ಷಕರಿಂದ ಪಡೆದಿರುವ ಸ್ವೀಕೃತಿಯನ್ನು ನಿಪಿಃ **7** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **7**(ಎ) ಎಂದು ಗುರ್ತಿಸಲಾಯಿತು.

**9)** ಆಹಾರ ನಿರೀಕ್ಷಕರು ನೀಡಿರುವ ವರದಿಯನ್ನು ನಿಪಿಃ **8** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **8**(ಎ) ಎಂದು ಗುರ್ತಿಸಲಾಯಿತು.

**ಮರು ವಿಚಾರಣೆ ಃ ಇಲ್ಲ**

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ ಕೆ ಎನ್ ವಕೀಲರಿಂದ</u>**

1) ನಿಪಿ 3 ರ ಪಂಚನಾಮೆ ಪೂರ್ವದಲ್ಲಿ ಪೋಲೀಸರಿಗೆ ನೋಟೀಸನ್ನು ನೀಡಿದ್ದೆನು. ಪಂಚನಾಮೆ ಮಾಡಿದ ಸ್ಥಳವು ಚನ್ನಪಟ್ಟಣ ತಾಲ್ಲೂಕಿನ ಮಧ್ಯಭಾಗದಲ್ಲಿ ಇದೆ ಎಂದರೆ ಸರಿ. ಆ ಸ್ಥಳದಲ್ಲಿ ಕಲಾ ರಂಗ ಮಂದಿರ ಇದೆ ಎಂದರೆ ಸರಿ. ಪಂಚನಾಮೆಯಲ್ಲಿ ಪಂಚನಾಮೆ ಮಾಡಿದ ಸ್ಥಳದ ಪಶ್ಚಿಮ ದಿಕ್ಕಿಗೆ ಏನು ಇದೆ ಎಂಬುದನ್ನು ಉಲ್ಲೇಖ ಮಾಡಿಲ್ಲ ಎಂದರೆ ಸರಿ. ಸದರಿ ಸ್ಥಳದ ಯಾವ ದಿಕ್ಕಿಗೆ ಕೊಲ್ಲಾಪುರದಮ್ಮ ದೇವಸ್ಥಾನ ಇದೆ ಎಂಬುದನ್ನು ನಮೂದು ಮಾಡಿಲ್ಲ ಎಂದರೆ ಸರಿ. ಸದರಿ ಪಂಚನಾಮೆ ಮಾಡಿದ ಸ್ಥಳದ ಬಳಿ ನರ್ಸರಿ, ಟೀ ಅಂಗಡಿ ಮತ್ತು ತರಕಾರಿ ಅಂಗಡಿಗಳು ಇವೆ ಎಂದರೆ ಸರಿ. ಸದರಿ ಅಂಗಡಿಯ ಮಾಲೀಕರು ಮತ್ತು ಕೆಲಸಗಾರರನ್ನು ಪಂಚರಾಗಿ ಸಹಕರಿಸುವಂತೆ ಕೇಳಿಲ್ಲ ಮತ್ತು ಪಂಚರಾಗಿ ತೆಗೆದುಕೊಂಡಿಲ್ಲ. ಗೋಣೀಚೀಲ ಸುಟ್ಟು ಹಾಕಿದ್ದರು ಎಂದು ತೋರಿಸುವ ಸಲುವಾಗಿ ಭಾವಚಿತ್ರಗಳನ್ನು ತೆಗೆದಿಲ್ಲ. ಗೋಣೀಚೀಲ ಸುಟ್ಟು ಹಾಕಲಾಗಿತ್ತು ಎಂದು ತೋರಿಸಲು ಚೀಲದ ಬೂದಿಯನ್ನು ಜಪ್ತು ಪಡಿಸಿರುವುದಿಲ್ಲ. ನಾನು ಯಾವುದೇ ಸ್ಥಳಕ್ಕೆ ಭೇಟಿ ಕೊಟ್ಟಿಲ್ಲ, ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ.

2) ಠಾಣಾ ಅಂಕೆ ಸಂಖ್ಯೆಗೋಸ್ಕರ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ವಿರುದ್ದ ಸುಳ್ಳು ದೂರು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಆರೋಪಿತರ ಯಾವುದೇ ತಪ್ಪು ಇರದಿದ್ದರೂ ಸಹ ಅವರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು)

ಓ.ಹೆ.ಕೆ.ಸರಿ ಇದೆ.

ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳು
ಚನ್ನಪಟ್ಟಣ